# ಸುರತ್ಕಲ್ ಎನ್ಐಟಿಕೆಗೆ ಅವಳಿ ಪ್ರಶಸ್ತಿ



**ಸುರತ್ಕಲ್:** ಎನ್ಐಟಿಕೆ ತಂಡ ತಮಿಳು ನಾಡು ತಿರುಚ್ಚಿ ಎನ್ಐಟಿಯಲ್ಲಿ ಜ. 5ರಿಂದ 8 ವರೆಗೆ ನಡೆದ ಅಖಿಲ ಭಾರತ ಮಟ್ಟದ ಪುರುಷರ ಹಾಕಿ ಪಂದ್ಯಾಟದಲ್ಲಿ ಚಿನ್ನ ಮತ್ತು ಕ್ರಿಕೆಟ್‌ನಲ್ಲಿ ಕಂಚಿನ ಪದಕ ಪಡೆದಿದೆ.

ಹಾಕಿಯಲ್ಲಿ ಒಟ್ಟು 9 ಎನ್ಐಟಿ ತಂಡಗಳು ಭಾಗವಹಿಸಿದ್ದು ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಪಂದ್ಯಾಟ ನಡೆದಿತ್ತು.

ಕ್ರಿಕೆಟ್‌ನಲ್ಲಿ ಎನ್ಐಟಿಕೆ ಎರಡನೇ ರನ್ನರ್ಸ್ ಅಪ್ ಪಡೆಯಿತು. ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಭಾರತೀಯ ಅತ್ಲೆಟಿಕ್ಸ್ ತಂಡದ ಮುಖ್ಯ ತರಬೇತುದಾರ ಪಿ. ರಾಧಾಕೃಷ್ಣನ್ ಮುಖ್ಯ ಅತಿಥಿಯಾಗಿದ್ದು ತಂಡದ ಸಾಧನೆಯನ್ನು ಎನ್ಐಟಿಕೆ ನಿರ್ದೇಶಕ ಪ್ರೊ. ಬಿ. ರವಿ ಶ್ಲಾಘಿಸಿದ್ದಾರೆ.

Vijaya Karnataka, Date:16/01/24, p, no - 03